**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 402/2009 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಸಂಜಯರೆಡ್ಡಿ |
| ತಂದೆಃ ಗಂಡ | ಃ | ಶ್ರೀಮಂತರೆಡ್ಡಿ |
| ವಯಸ್ಸು | ಃ | ೫೨ ವರ್ಷ |
| ಉದ್ಯೋಗ | : | ಪಶು ವೈದ್ಯಾಧಿಕಾರಿಗಳು |
| ವಾಸಸ್ಥಳ | ಃ | ಆಳಂದ |

ದಿನಾಂಕಃ ೨೨.೦೨.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ನಾನು 1998 ರಿಂದ ಪಶು ವೈದ್ಯಾಧಿಕಾರಿ ಎಂದು ಆಳಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. 2016 ನೇ ಇಸವಿಯಲ್ಲಿ ತಾಲೂಕಾ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತಿ ಕಾರ್ಯಾಲಯ ಆಳಂದದಲ್ಲಿ ಹೆಚ್ಚುವರಿ ಕರ್ತವ್ಯಕ್ಕೆ ನೇಮಕಗೊಂಡಿದ್ದೆನು.

ದಿ.24.10.2016 ರಂದು ಸಿ.ಇ.ಓ. ಜಿಲ್ಲಾ ಪಂಚಾಯತ ರವರ ಆದೇಶದ ಮೇರೆಗೆ ಹೆಬಳಿ ಗ್ರಾಮ ಪಂಚಾಯತಿ ಪಿ.ಡಿ.ಓ. ಶ್ರೀಶೈಲ ಮತ್ತು ಅಧ್ಯಕ್ಷರಾದ ಶ್ರೀಮತಿ ಕವಿತಾ ರವರು ಸ್ವಚ್ಛ ಭಾರತ ಮಿಷನ ಯೋಜನೆಯಿಯಲ್ಲಿ ಸುಮಾರು 2,01,000/- ಗಳನ್ನು 01.10.2014 ರಿಂದ 11.04.2016 ರ ಅವಧಿಯಲ್ಲಿ 15 ಜನ ಫಲಾನುಭವಿಗಳ ಹೆಸರಿನಲ್ಲಿ ದುರುಪಯೋಗಪಡಿಸಿಕೊಂಡಿರುತ್ತಾರೆ. ದಿ.15.12.2015 ರಿಂದ 21.12.2015 ರವರೆಗೆ ರೂ.63,000-00 ಗಳನ್ನು ಸ್ವಂತಕ್ಕೆ ಹಣ ಬಳಸಿಕೊಂಡು ಸರಕಾರಕ್ಕೆ ಮೋಸ ಮಾಡಿರುತ್ತಾರೆ. ಸದರಿ ಆರೋಪಿತರು ಸರಕಾರದ ಹಣವನ್ನು ದುರುಪಯೋಗಪಡಿಸಿಕೊಂಡ ಕಾರಣಕ್ಕಾಗಿ ಮೇಲಾಧಿಕಾರಿಗಳ ಆದೇಶದ ಮೇರೆಗೆ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಫಿರ್ಯಾದಿಯನ್ನು ನಿಪಿ-1 ಎಂದು ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಿರುತ್ತಾರೆ. ಸಾಕ್ಷಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಲಬುರಗಿರವರು ನೀಡಿರು ಪತ್ರವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-೨ ಎಂದು ಗುರುತಿಸಲಾಯಿತು. ಫಿರ್ಯಾದಿಯ ಜೊತೆಗೆ ಬ್ಯಾಂಕ ಸ್ಟೇಟಮೆಂಟನ್ನು ನೀಡಿರುತ್ತೇವೆ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರಕ್ಷಕ ಉಪನೀರೀಕ್ಷಕರಿಗೆ ನೀಡಿರುವ ಪತ್ರದಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪತ್ರವನ್ನು ನಿಪಿ-೩ ಎಂದು ಸಹಿಯನ್ನು ನಿಪಿ-೩(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಬ್ಯಾಂಕ ಸ್ಟೇಟಮೆಂಟಗಳಲ್ಲಿನ ೧೦ ಪೇಜುಗಳಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಬ್ಯಾಂಕ ಸ್ಟೇಟಮೆಂಟನ್ನು ಒಟ್ಟಾಗಿ ನಿಪಿ-೪ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋ ಪಿತರ ಪ ರ ಶ್ರೀ ಎಸ್.ಡಿ.ಬಿ. ವಕೀಲರಿಂದ</u>**

ನನ್ನ ಮೇಲಾಧಿಕಾರಿಗಳು ದಿ.06.10.2016 ರಂದು ನನಗೆ ಆದೇಶ ಮಾಡಿರುತ್ತಾರೆ. ಮೇಲಾಧಿಕಾರಿಗಳು ಆದೇಶ ಮಾಡಿದ ನಂತರ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ಗ್ರಾಮಕ್ಕೆ ಹೋಗಿ ಯಾರು ಶೌಚಾಲಯ ಮಾಡಿಕೊಂಡಿದ್ದಾರೆ ಯಾರು ಮಾಡಿಕೊಂಡಿಲ್ಲ ಎಂದು ವಿಚಾರಣೆ ಮಾಡಿದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿ ಸಲ್ಲಿಸಿದ ನಂತರ ಯಾವತ್ತೂ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ಪಿರ್ಯಾದಿ ಸಲ್ಲಿಸುವ ಪೂರ್ವದಲ್ಲಿಯೂ ಸಹ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ಆರೊಪಿ ನಂ.೧ ಡಿಪಾರ್ಟಮೆಂಟ ತನಿಖೆ ಆದ ನಂತರ ದೋಷಮುಕ್ತ ಆಗಿದ್ದಾನೆ ಎಂದರೆ ಸಾಕ್ಷಿ ಆಗಿದ್ದಾನೆ ಎಂದು ತಿಳಿದು ಬಂದಿರುತ್ತದೆ ನಿರ್ದಿಷ್ಟವಾಗಿ ಆಗಿದ್ದಾನೆ ಅಥವಾ ಇಲ್ಲವೋ ಎಂದು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮೇಲಾಧಿಕಾರಿಗಳ ಆದೇಶ ಪಾಲನೆ ಮಾಡಿರುತ್ತೇನೆ, ಈ ಪ್ರಕರಣದ ಬಗ್ಗೆ ವೈಯಕ್ತಿಕವಾಗಿ ನನಗೆ ಗೊತ್ತಿಲ್ಲ ಎಂದರೆ ಸರಿ.

ದಿ.24.10.2016 ರಂದು ಸಿ.ಇ.ಓ. ಜಿಲ್ಲಾ ಪಂಚಾಯತ ರವರ ಆದೇಶದ ಮೇರೆಗೆ ಹೆಬಳಿ ಗ್ರಾಮ ಪಂಚಾಯತಿ ಪಿ.ಡಿ.ಓ. ಶ್ರೀಶೈಲ ಮತ್ತು ಅಧ್ಯಕ್ಷರಾದ ಶ್ರೀಮತಿ ಕವಿತಾ ರವರು ಸ್ವಚ್ಛ ಭಾರತ ಮಿಷನ ಯೋಜನೆಯಿಯಲ್ಲಿ ಸುಮಾರು 2,01,000/- ಗಳನ್ನು 01.10.2014 ರಿಂದ 11.04.2016 ರ ಅವಧಿಯಲ್ಲಿ 15 ಜನ ಫಲಾನುಭವಿಗಳ ಹೆಸರಿನಲ್ಲಿ ದುರುಪಯೋಗಪಡಿಸಿಕೊಂಡಿರುತ್ತಾರೆ. ದಿ.15.12.2015 ರಿಂದ 21.12.2015 ರವರೆಗೆ ರೂ.63,000-00 ಗಳನ್ನು ಸ್ವಂತಕ್ಕೆ ಹಣ ಬಳಸಿಕೊಂಡು ಸರಕಾರಕ್ಕೆ ಮೋಸ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಆರೋಪಿತರು ಸರಕಾರದ ಹಣವನ್ನು ದುರುಪಯೋಗಪಡಿಸಿಕೊಂಡ ಕಾರಣಕ್ಕಾಗಿ ಮೇಲಾಧಿಕಾರಿಗಳ ಆದೇಶದ ಮೇರೆಗೆ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ